ಮತ್ತು ಜಿಲ್ಲೆಯಲ್ಲಿರತಕ್ಕಂಥ ಸಹಕಾರಿ ಸಂಸ್ಥೆಗಳ ಮತ್ತು ಬ್ಯಾಂಕ್‌ಗಳ ಅಂಕಿಅಂಶಗಳನ್ನು ಒದಗಿಸಿದ್ದಾರೆ. ರೈತರ ಹಾಗೂ ಸಾರ್ವಜನಿಕರ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಸಂಸ್ಥೆಗಳು ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ ಎಂದು ಅವರು ಉತ್ತರದಲ್ಲಿ ಕಾಣಿಸಿದ್ದಾರೆ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ನಾನು ಹೇಳುವುದಿದ್ದರೆ ರೈತರ ಸಹಕಾರ ಸೇವಾ ಸಂಘಗಳು ಮತ್ತು ಜನತಾ ಬಜಾರ್‌ಗಳು, ಸಹಕಾರ ತತ್ವಗಳ ಆಧಾರದ ಮೇಲೆ ತಮ್ಮ ಉದ್ದೇಶಗಳನ್ನು ಜಾರಿಗೊಳಿಸತಕ್ಕಂಥಾದ್ದರಲ್ಲಿ ಕಾಂಪ್ಲೆಕ್ಸ್ ಕಟ್ಟಡಗಳನ್ನು ಕಟ್ಟಿ, ಹೆಚ್ಚಿನ ದರದಲ್ಲಿ ಬಾಡಿಗೆಯನ್ನು ಕೊಡುವುದರ ಮೂಲಕ ಆ ಒಂದು ತತ್ವದ ಕಾರ್ಯಾಚರಣೆಗೆ ವಿಮುಖವಾಗಿ ನಡೆದುಕೊಳ್ಳುತ್ತಾ ಇದ್ದಾರೆ. ಇಂಥ ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಪ್ರಶ್ನೆಯನ್ನು ಕೇಳುತ್ತಾ ಅದಕ್ಕೆ ಸೂಕ್ತ ಉತ್ತರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಂಥಾದ್ದು ಏನೂ ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ, ಆ ಕುರಿತು ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕಾನೂನು ಪ್ರಕಾರವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ವೈ. ಮೋತಿ ವೀರಣ್ಣ:– ಮಾನ್ಯ ಸಚಿವರ ಗಮನಕ್ಕೆ ಆ ವಿಚಾರವನ್ನು ತರುತ್ತೇನೆ. ಅದೇ ರೀತಿಯಲ್ಲಿ ಕನ್ಸೂಮರ್ಸ್ ಕೋ – ಆಪರೇಟಿವ್ ಸೊಸೈಟಿಗಳು ಮತ್ತು ಪ್ರೈಮರಿ ಸೊಸೈಟೀಸ್‌ಗಳಿಗೆ ಆಹಾರ ವಿತರಣೆ ಮಾಡುವುದಕ್ಕೋಸ್ಕರವಾಗಿ ಕಳುಹಿಸಿ ಕೊಟ್ಟಿದ್ದನ್ನು ಹೋಲ್‌ಸೇಲ್ ಪಾಯಿಂಟ್‌ನಿಂದ ವಿತರಣೆ ಮಾಡಿದ್ದು ಗ್ರಾಮಾಂತರಗಳಿಗೆ ಮುಟ್ಟುತ್ತಾ ಇಲ್ಲ, ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಹಸಿರು ಕಾರ್ಡ್‌ಗಳ ಮೂಲಕ ಎಣ್ಣೆ ಮತ್ತಿತರ ಪದಾರ್ಥಗಳು ಕೊಡುತ್ತಿದ್ದೀರಿ ಅದು ಜನರಿಗೆ ಮುಟ್ಟುತ್ತಾ ಇಲ್ಲ. ಎಲ್ಲಿ ಅದು ಹೋಲ್‌ಸೇಲ್ ಪಾಯಿಂಟ್‌ನಲ್ಲಿ ವಿತರಣೆಯಾಗುತ್ತದೆ ಅಲ್ಲಿಯೇ ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಗೂಡ್ಸ್‌ಗಳು ಪಾಯಿಂಟ್‌ನಲ್ಲಿ ವಿತರಣೆಯಾಗುತ್ತದೆ. ಅಲ್ಲಿಯೇ ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಗೂಡ್ಸ್‌ಗಳು ಮಾರಾಟವಾಗಿ, ಯಾವ ಸಹಕಾರ ತತ್ವಗಳ ಮೂಲಕ ಜನರಿಗೆ ಮುಟ್ಟಿಸಬೇಕೆಂಬ ಉದ್ದೇಶವಿದೆ. ಅದು ಸಫಲವಾಗುತ್ತಾ ಇಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆಯೇ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಸದಸ್ಯರು ಕೂಡ ಕೋ–ಆಪರೇಟಿವ್ ಫೀಲ್ಡ್‌ನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ನಮ್ಮಲ್ಲಿ 25 ಸಾವಿರಕ್ಕಿಂತಲೂ ಹೆಚ್ಚಿನ ಕೋ–ಆಪರೇಟಿವ್ ಸೊಸೈಟಿಗಳು ಇವೆ. ಅದರಲ್ಲಿ 7–8 ಸಾವಿರಗಳಷ್ಟು ಡಿಫಾಲ್ಟ್ ಇವೆ. ಉಳಿದಂಥ 17–18 ಸಾವಿರ ಸೊಸೈಟಿಗಳು ವಿವಿಧ ಉದ್ದೇಶಗಳನ್ವಯ ಕೆಲಸ ಮಾಡುತ್ತಾ ಇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕನ್ಸೂಮರ್ಸ್ ಕೋ – ಆಪರೇಟಿವ್ ಸೊಸೈಟೀಸ್ ಮತ್ತು ಹಳ್ಳಿಗಳಲ್ಲಿರತಕ್ಕಂಥ ವ್ಯವಸಾಯ ಸಹಕಾರಿ ಸಂಘಗಳು ಅನೇಕ ಸಾರಿ ಈ ತಾಲ್ಲೂಕುಮಟ್ಟದಿಂದ ತೆಗೆದುಕೊಂಡು ಹೋಗಿ, ಹಳ್ಳಿಗಳಿಗೆ ಮುಟ್ಟಿಸುವುದೇ ಇಲ್ಲ. ಆದ್ದರಿಂದ ಅಲ್ಲಿಯ ಮಾನ್ಯ ಶಾಸಕರು ಇಂಥ ಸೊಸೈಟಿಯವರು ವಸ್ತುಗಳನ್ನು ಸರಿಯಾಗಿ ಮುಟ್ಟಿಸುತ್ತಾ ಇಲ್ಲ ಎಂದು ಕಂಡು ಬಂದು, ಅದನ್ನು ಹೇಳಿದರೆ, ಖಂಡಿತವಾಗಿ ಅಂಥ ಸೊಸೈಟಿಗಳ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಗೆ ಚುನಾವಣೆ

(1762): ಶ್ರೀ ಡಿ. ಹಲಗೇಗೌಡ (ಪಾಂಡವಪುರ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ರಾಜ್ಯದಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ರಾಜ್ಯಮಟ್ಟದವರೆಗೆ ಸಹಕಾರ ಸಂಘ ಮತ್ತು ಮಂಡಳಿಗಳ ಅವಧಿ ಮುಗಿದಿದ್ದರೂ ವರ್ಷಾನುಗಟ್ಟಲೆಯಿಂದ ಚುನಾವಣೆ ಮಾಡದೆ ಮುಂದುವರೆಯುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಾದರೆ ವರ್ಷಾನುಗಟ್ಟಲೆ ಮುಂದುವರೆದಿರುವ ಆಡಳಿತ ಮಂಡಳಿಗಳ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಆ. ರಾಜ್ಯದಲ್ಲಿ ಕೆಲವು ಸಹಕಾರ ಸಂಘಗಳು ಚುನಾವಣೆಗಳನ್ನು ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ವಾರ್ಷಿಕ ಮಹಾಸಭೆ ಹಾಗೂ ಚುನಾವಣೆಗಳನ್ನು ನಡೆಸದೇ ಇದ್ದ ಸಹಕಾರ ಸಂಘಗಳು ದಿನಾಂಕ: 16-1-1993 ರಿಂದ 31-1-1993ರ ಒಳಗೆ ಚುನಾವಣೆಗಳನ್ನು ನಡೆಸಲು ಸರ್ಕಾರವು ನಿರ್ದೇಶನ ನೀಡಿ ಆದೇಶ ಹೊರಡಿಸಿದೆ. ದಿನಾಂಕ: 31-1-93 ಕ್ಕೆ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳಲ್ಲಿ ಶೇಕಡ 82ರಷ್ಟು ಸಂಘಗಳು ಚುನಾವಣೆ ನಡೆಸಿವೆ. ಇನ್ನೂ ಚುನಾವಣೆ ನಡೆಸದೇ ಇರುವ ಸಹಕಾರ ಸಂಘಗಳಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ರಾಜ್ಯಮಟ್ಟದ ಮತ್ತು ಜಿಲ್ಲಾ ಮಟ್ಟದ ಸಹಕಾರಿ ಸಂಘಗಳು ಇನ್ನೂ ಕೂಡ ಚುನಾವಣೆ ಮಾಡದಿರತಕ್ಕಂಥ ವಿಚಾರಗಳು ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಕೆಲವು ರಾಜ್ಯಮಟ್ಟದ ಸಹಕಾರಿ ಸಂಘಗಳು, ಸರ್ವಸದಸ್ಯರ ಸಭೆಯನ್ನು ಇಟ್ಟುಕೊಂಡ ಹಿಂದಿನ ದಿವಸ ಸರಕಾರವೇ ಅದನ್ನು ಮುಂದೂಡಿದೆ, ಅಥವಾ ಕೆಲವರು ಇದನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡಿದ್ದಾರೆ. ಯಾವುದಾದರೂ ಒಂದು ಲೋಪವನ್ನು ತೆಗೆದುಕೊಂಡು ಕೋರ್ಟ್‌ಗೆ ಹಾಕುವುದು, ಸ್ಟೇ ತರುವುದು, ಎರಡು ವರ್ಷ, ನಾಲ್ಕು ವರ್ಷ ಹೀಗೆ ಮುಂದುವರಿಯತಕ್ಕಂಥಾದ್ದು ಇದೆ. ರಾಜ್ಯಮಟ್ಟದ ಅನೇಕ ಮಂಡಳಿಗಳು ಮತ್ತು ಸಹಕಾರಿ ಸಂಸ್ಥೆಗಳು 5–6 ವರ್ಷಗಳಿಂದ ಮುಂದುವರಿಯುತ್ತಾ ಇವೆ. ಸರಕಾರವೇ ಈ ರೀತಿಯಾಗಿ ಅಂಥವರ ಜೊತೆಗೆ ಶಾಮೀಲಾಗುತ್ತಿದ್ದಾರೆಯೇ ಅಥವಾ ನಿಜವಾದ ಕ್ರಮಗಳನ್ನು ಅಂಥವರ ಮೇಲೆ ಕೈಗೊಳ್ಳುತ್ತಿದೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಸಹಕಾರಿ ರಂಗದಲ್ಲಿ ಇನ್ನೂ ಚುನಾವಣೆಗಳು ಆಗಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ರಾಜ್ಯದಲ್ಲಿ ಒಟ್ಟು 22,419ಸೊಸೈಟಿಗಳು ಇದ್ದು, ಇವೊತ್ತು ಕೆಲಸ ಮಾಡುತ್ತಿರುವಂಥವುಗಳು 18,441 ಮಾತ್ರ. ಅದರಲ್ಲಿ ಎಲೆಕ್ಷನ್ ಆಗಿರುವುದು 15,188.ಆಗದೇ ಇರತಕ್ಕಂಥವುಗಳು 3,253.ಅಂದರೆ ಸುಮಾರು 82ಪರ್‌ಸೆಂಟಿನಷ್ಟು ಸೊಸೈಟಿಗಳು ಇವೊತ್ತು ಚುನಾವಣೆಗಳಿಗೆ ಹೋಗಿವೆ. ಇದರಲ್ಲಿ ಅತ್ಯಂತ ಕಡಿಮೆ ಚುನಾವಣೆಗೆ ಹೋದವು ಅಂದರೆ, ತುಂಬಾ ಅನ್‌ಡೆಮಾಕ್ರಟಿಕ್ ಡಿಸ್ಟ್ರಿಕ್ಟ್ಸ್ ಎಂದು ನಾವು ಹೇಳಬಹುದು, ಅವುಗಳು ಯಾವುವು ಅಂದರೆ, ಚಿಕ್ಕಮಗಳೂರು, ಹಾಸನ, ಸ್ವಲ್ಪಮಟ್ಟಿಗೆ ಮೈಸೂರು, ಬೆಂಗಳೂರು ಸಿಟಿ ಇಲ್ಲಿ ಬಿಟ್ಟರೆ 48 ಪರ್ಸೆಂಟ್, ಮೈಸೂರಿನಲ್ಲಿ 37, ಹಾಸನದಲ್ಲಿ 45, ಚಿಕ್ಕಮಗಳೂರಿನಲ್ಲಿ 36 ಪರ್ಸೆಂಟ್ ಬಿಟ್ಟರೆ ಉಳಿದವುಗಳೆಲ್ಲವೂ ಕೂಡ 60, 80, 90 ಪರ್ಸೆಂಟ್‌ನ ತನಕ ಚುನಾವಣೆಗಳು ಆಗಿವೆ. ಆದ್ದರಿಂದ ಎಲ್ಲಿಯೂ ಚುನಾವಣೆಗಳು ನಡೆದಿಲ್ಲ ಎಂಬುದನ್ನು ಒಪ್ಪುವುದಿಲ್ಲ. ಆದರೆ ರಾಜ್ಯಮಟ್ಟದಲ್ಲಿ ಕೆಲವೊಂದು ಸಂಸ್ಥೆಗಳಲ್ಲಿ ಚುನಾವಣೆಗಳನ್ನು ಮುಂದೂಡುತ್ತಾ ಇದ್ದಾರೆ ಎಂಬ ಮಾತ್ನನ್ನು ಹೇಳಿದ್ದಾರೆ,

ಅಂಥ ಯಾವ ಸೊಸೈಟಿಗಳಾಗಲೀ, ಅಪೆಕ್ಸ್ ಸಂಸ್ಥೆಗಳಾಗಲೀ ಇದ್ದರೆ ಅದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ನಿರ್ದಿಷ್ಟವಾಗಿ ಅದು ಮಾರ್ಕೆಟಿಂಗ್ ಫೆಡರೇಶನ್, ಅಪೆಕ್ಸ್ ಬ್ಯಾಂಕ್, ಇತ್ಯಾದಿಯಾಗಿ ಖಚಿತವಾಗಿ ಹೇಳಬೇಕು. ಅದರ ಬಗ್ಗೆ ನಾನು ಗಮನ ಹರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಅಧ್ಯಕ್ಷರೇ, ನಾನು ಎಲ್ಲಿಯೂ ಚುನಾವಣೆಗಳು ನಡೆದಿಲ್ಲ ಎಂದು ಹೇಳುವುದಿಲ್ಲ. ಸಣ್ಣ ಸಹಕಾರ ಸಂಘಗಳು ಇರಲಿ, ಆದರೆ ಕೆಲವು ದೊಡ್ಡ ದೊಡ್ಡ ಸಹಕಾರಿ ಸಂಘಗಳು, ವಿನಾಕಾರಣ ಯಾವುದಾದರೂ ನೆಪವನ್ನು ಒಡ್ಡಿ ಮುಂದಕ್ಕೆ ಹಾಕುವುದು, ಸ್ಟೇ ಇತ್ಯಾದಿಗಳ ಮೂಲಕ ಇನ್ನೂ 3–4 ವರ್ಷಗಳ ಕಾಲ ಮುಂದುವರಿಯತಕ್ಕಂಥಾದ್ದು ಇದೆ. ಜನರಲ್ ಬಾಡಿ ನಾಳೆ ಅಂದರೆ, ಅದರ ಮುಂಚಿನ ದಿವಸ ಮುಂದೂಡಿದ್ದಾರೆ. ರಾಜ್ಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕನ್ನು, ಮಾರ್ಕೆಟಿಂಗ್ ಫೆಡರೇಶನನ್ನು ಹೀಗೆ ಮಾಡಿದ್ದಾರೆ. ಹೀಗೆ ಮಾಡಿದರೆ ಸಹಕಾರಿ ಚಳುವಳಿಯು ಉಳಿಯುತ್ತದೆಯೇ ? ಅವರು ಒತ್ತಾಯ ಮಾಡದಿದ್ದರೂ ಇವರೇ ಮುಂದೆ ಹಾಕಿಕೊಂಡು ಬರುವ ಅರ್ಥ ಏನು ? ಹೀಗೆ ನೆಪ ಒಡ್ಡಿ ಕೋರ್ಟ್ ಕಚೇರಿಗಳಿಗೆ ಹೋಗುತ್ತಾ ಇದ್ದರೆ, ಆಡಳಿತಾಧಿಕಾರಿಗಳನ್ನು ಹಾಕುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಂಥ ಯಾವುದಾದರೂ ಸೊಸೈಟಿಗಳು ಮುಂದೆ ಹೋಗಿದ್ದರೆ, ಅದು ಯಾವ ಕಾರಣಕ್ಕಾಗಿ ಮುಂದಕ್ಕೆ ಹೋಗಿದೆ ಎಂಬುದನ್ನು ನೋಡಿ, ಕ್ರಮ ತೆಗೆದುಕೊಳ್ಳುತ್ತೇನೆ.

ನೆರೆ ಹಾವಳಿಯಿಂದ ಹಾನಿಯಾಗಿರುವ ಮನೆಗಳಿಗೆ ಪರಿಹಾರ

(392): ಶ್ರೀ ಬಾದರಹಳ್ಳಿ ಹಂಪನಗೌಡ (ಸಿಂಧನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನೆರೆ ಹಾವಳಿಯಲ್ಲಿ ಸರ್ವೆ ಮಾಡುವ ಸಮಯದಲ್ಲಿ ಮನೆಗಳು ಬಿದ್ದಿದ್ದು, ಅಂತಹವರಿಗೆ ಇನ್ನೂ ಪರಿಹಾರ ಧನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಅಂತಹವರಿಗೆ ಸರಕಾರ ಪರಿಹಾರ ಧನ ನೀಡುವುದೇ;

ಇ. ನೆರೆ ಹಾವಳಿಯಲ್ಲಿ ರೈತರು ಬೆಳೆದ ಬೆಳೆಗಳು ನಾಶವಾಗಿದ್ದು ಅವರಿಗೆ ಸರಕಾರ ಪರಿಹಾರ ಧನ ನೀಡುವುದೇ;

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ಇ. ನಾಶವಾದ ಪ್ರತಿ ಹೆಕ್ಟೇರ್ ಬೆಳೆಗೆ 500.00 ರೂಪಾಯಿಗಳಂತೆ ಕೃಷಿ ಸಾಮಗ್ರಿಗಳ ರೂಪದಲ್ಲಿ ಪರಿಹಾರ ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಾದರಹಳ್ಳಿ ಹಂಪನಗೌಡ:– ಮಾನ್ಯ ಅಧ್ಯಕ್ಷರೇ, ನೆರೆಹಾವಳಿಯಲ್ಲಿ ಸರ್ವೆ ಮಾಡುವ ಸಮಯದಲ್ಲಿ ಮನೆಗಳು ಬಿದ್ದಿದ್ದು ಅಂಥವರಿಗೆ ಇನ್ನೂ ಪರಿಹಾರವನ್ನು ನೀಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಉತ್ತರದಲ್ಲಿ 'ಇಲ್ಲ' ಎಂದು ಹೇಳುತ್ತಾರೆ. ಹಾಗಿದ್ದಲ್ಲಿ ಅಂಥವರಿಗೆ ಸರಕಾರ ಪರಿಹಾರಧನ ನೀಡುವುದೇ ಎಂದು ಕೇಳಿದ್ದೇನೆ, ಅದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ನೆರೆ ಹಾವಳಿಯಲ್ಲಿ ರೈತರು ಬೆಳೆದ ಬೆಳೆಗಳು ನಾಶವಾಗಿದ್ದು, ಅದಕ್ಕೆ ಸರ್ಕಾರದವರು